ಮೇ 2023

# ರಾಮನಗರದ ಸಾತನೂರಿನಲ್ಲಿ ಇದ್ರಿಸ್ ಪಾಷಾ ಅವರ ಕೊಲೆಯ ಕುರಿತ ಸತ್ಯ ಶೋಧನಾ ವರದಿ



# ಪರಿವಿಡಿ

01.
ಪರಿಚಯ

02.
ಹಿನ್ನೆಲೆ

03.
ಕೃತ್ಯಗಳ ಸಂಕ್ಷಿಪ್ತ ವಿವರಣೆ

04.
ಗಮನಿಸಲಾದ ಪ್ರಮುಖ ಅಂಶಗಳು

05.
ಶಿಫಾರಸ್ಸುಗಳು

# ಪೀಠಿಕೆ

ಏಪ್ರಿಲ್ 01, 2023 ರಂದು ಸುದ್ದಿ ಪತ್ರಿಕೆಗಳು ಮಾರ್ಚ್ 30, 2023 ರಂದು ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಸಾತನೂರು ಗ್ರಾಮದಲ್ಲಿ ಪುನೀತ್ ಕೆರೆಹಳ್ಳಿ ಹಾಗೂ ರಾಷ್ಟ್ರ ರಕ್ಷಣಾ ಪಡೆಯ ಸ್ವಯಂ-ಘೋಷಿತ "ಗೋರಕ್ಷಕರು" ಮೂವರು ಜಾನುವಾರು ವ್ಯಾಪಾರಿಗಳ ಮೇಲೆ ನಡೆಸಿದ ಒಂದು ಹಲ್ಲೆಯ ಕುರಿತು ವರದಿ ಮಾಡಿದವು. ಇವರು ನಡೆಸಿದ ಈ ಹಲ್ಲೆಯಲ್ಲಿ ಇದ್ರಿಸ್ ಪಾಷಾ ಎಂಬುವವರು ಮರಣಕ್ಕೀಡಾದರೆ ಅವರ ಸಹಚರಿಗೆ ಗಾಯಗಳಾಗಿದ್ದವು. ಈ ಮೂವರು ಮಂಡ್ಯ ಮೂಲದವರಾಗಿದ್ದರು. ಈ ಮೇಲಿನ ಕೃತ್ಯದ ಕುರಿತು ವಕೀಲ ಸಿವಮಣಿದನ್, ಡಾ. ಸಿಲ್ವಿಯ ಕರ್ಪಗಂ, ಸಿದ್ಧಾರ್ಥ್ ಕೆ ಜೆ, ಮತ್ತು ಖಾಸಿಂ ಶೋಹೈಬ್ ಖುರೇಶಿ ಹಾಗೂ ಆಲ್ ಇಂಡಿಯಾ ಜಮೈತುಲ್ ಖುರೇಶ್ (ಕರ್ನಾಟಕ) ಸದಸ್ಯರ ತಂಡವು ಸತ್ಯ ಶೋಧನಾ ವರದಿಯನ್ನು ನಡೆಸಿತು.

ಈ ಸತ್ಯ ಶೋಧನಾ ತಂಡವು ಕೃತ್ಯ ನಡೆದ ಸ್ಥಳಕ್ಕೆ (ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಸಾತನೂರು ಗ್ರಾಮ) ಭೇಟಿ ನೀಡಿ, ಅಲ್ಲಿನ ಸ್ಥಳೀಯ ನಿವಾಸಿಗಳೊಂದಿಗೆ ಮಾತುಕತೆ ನಡೆಸಿತು. ಮುಂದುವರೆದು, ಈ ಸತ್ಯ ಶೋಧನಾ ತಂಡವು ಮಂಡ್ಯಕ್ಕೆ ಭೇಟಿ ನೀಡಿ ಇದ್ರಿಸ್ ಪಾಷಾ ಅವರ ಸಹೋದರ ಯೂನಸ್ ಪಾಷಾ ಸೇರಿದಂತೆ ಅವರ ಇನ್ನಿತರ ಕುಟುಂಬಸ್ಥರ ಜೊತೆ ಮಾತುಕತೆ ನಡೆಸಿತು. ಜಾನುವಾರು ವ್ಯಾಪಾರದಲ್ಲಿ ತೊಡಗಿಸಿಕೊಂಡಿರುವ ಇನ್ನಿತರ ಸಮುದಾಯದ ಸದಸ್ಯರೊಂದಿಗೆ ಮಾತನಾಡಿದ ಈ ತಂಡವು ಮಂಡ್ಯ ಮತ್ತು ಸಾತನೂರು ಮಾರ್ಗವಾಗಿ ಜಾನುವಾರುಗಳನ್ನು ಸಾಗಿಸುವಾಗ ಆಗಿರಬಹುದಾದ ಈ ರೀತಿಯ ಹಿಂಸೆಯ ಪ್ರಕರಣಗಳ ಕುರಿತು ಸಮಾಲೋಚಿಸಿತು.

ನಂತರ, ಈ ಪ್ರಕರಣಗಳ ತನಿಖಾಧಿಕಾರಿಯಾದ ಸರ್ಕಲ್ ಇನ್ಸ್‌ಪೆಕ್ಟರ್ (ಕನಕಪುರ) ಹಾಗೂ ಪೊಲೀಸ್ ಅಧೀಕ್ಷಕರ (ರಾಮನಗರ) ಜೊತೆ ಸತ್ಯಶೋಧನಾ ತಂಡವು ಮಾತಾಡಿತು. ವ್ಯಕ್ತಿಗಳ ವೈಯಕ್ತಿಕ ಗುರುತಿನ ರಕ್ಷಣೆಯ ಕಾರಣದಿಂದ ಈ ತಂಡವು ಸಂದರ್ಶಿಸಿದ ಹಲವು ವ್ಯಕ್ತಿಗಳ ಗುರುತನ್ನು ಇಲ್ಲಿ ಬಹಿರಂಗಪಡಿಸಿರುವುದಿಲ್ಲ. ಈ ವ್ಯಕ್ತಿಗಳು ಹಾಗೂ ಅಧಿಕಾರಿಗಳು ನೀಡಿದ ಹೇಳಿಕೆಗಳ ಆಧಾರದ ಮೇಲೆ ಸಾತನೂರಿನಲ್ಲಿ ಮಾರ್ಚ್ 30 ಹಾಗೂ ಏಪ್ರಿಲ್ 01 ರ ನಡುವಿನ ರಾತ್ರಿಯಲ್ಲಿ ನಡೆದ ಕೃತ್ಯಗಳ ಕುರಿತು ಸತ್ಯ ಶೋಧನಾ ತಂಡವು ಗಮನಿಸಿದ ಅಂಶಗಳು ಹಾಗೂ ಅದರ ಶಿಫಾರಸ್ಸುಗಳನ್ನು ಈ ವರದಿಯಲ್ಲಿ ನೀಡಿದೆ.

# ಹಿನ್ನೆಲೆ

ಸ್ವಯಂಘೋಷಿತ ಗೋ-ರಕ್ಷಕರು ಕಾನೂನುಬಾಹಿರವಾಗಿ ಕಾನೂನನ್ನು ಕೈಗೆ ತೆಗೆದುಕೊಂಡು ಜಾನುವಾರು ವ್ಯಾಪಾರಿಗಳು ಜಾನುವಾರುಗಳನ್ನು ಸಾಗಿಸುವಾಗ ಅವರ ವಾಹನಗಳನ್ನು ಅಡ್ಡಗಟ್ಟಿ ಅವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವುದು ಸಾತನೂರಿನಲ್ಲೇ ಮೊದಲಲ್ಲ ಎಂಬುದನ್ನು ಗಮನಿಸುವುದು ಮುಖ್ಯವಾಗುತ್ತದೆ. ಇಂತಹ ಕೃತ್ಯಗಳು ಬಿಜೆಪಿ ಸರ್ಕಾರ ಕರ್ನಾಟಕ ಜಾನುವಾರು ಹತ್ಯೆ ತಡೆಗಟ್ಟುವಿಕೆ ಮತ್ತು ಸಂರಕ್ಷಣಾ ಕಾಯಿದೆ, 2020 (ಇನ್ನು ಮುಂದೆ 2020 ರ ಕಾಯಿದೆ) ಅನ್ನು ಜಾರಿಗೆ ತಂದ ನಂತರ ಹೆಚ್ಚಾಗಿವೆ. ರಾಜ್ಯದಲ್ಲಿ ನಡೆದ ಇಂತಹ ಪ್ರಕರಣಗಳ ಪಟ್ಟಿಯನ್ನು ಈ ವರದಿಗೆ ಅಡಕ ಮಾಡಿರುವ ಅನುಬಂಧದಲ್ಲಿ ಕಾಣಬಹುದಾಗಿದೆ. ನಿಜ ಹೇಳಬೇಕೆಂದರೆ, ರಾಮನಗರ ಜಿಲ್ಲೆಯ ಪೊಲೀಸ್ ಅಧೀಕ್ಷಕರು ಹೇಳುವಂತೆ ಇದ್ರಿಸ್ ಪಾಷಾ ಕೊಲೆ ಆರೋಪಿ ಪುನೀತ್ ಕೆರೆಹಳ್ಳಿಯ ಮೇಲೆ ಇಂತಹ 11 ಕ್ರಿಮಿನಲ್ ಪ್ರಕರಣಗಳು ಬಾಕಿ ಇವೆ.

ಉತ್ತರ ಭಾರತದ ಹಲವು ರಾಜ್ಯಗಳಲ್ಲಿರುವ (ಉತ್ತರ ಪ್ರದೇಶ ಮತ್ತು ಗುಜರಾತ್) ಕಾಯಿದೆಗಳ ರೀತಿಯಲ್ಲಿಯೇ ಸಿದ್ಧಪಡಿಸಲಾದ 2020 ರ ಕಾಯಿದೆಯು ಜಾನುವಾರುಗಳ (ಹಸು, ಹಸುವಿನ ಕರು, ಗೂಳಿ, ಎಲ್ಲಾ ವಯಸ್ಸಿನ ಎತ್ತುಗಳು, ಹದಿಮೂರು ವರ್ಷಕ್ಕೂ ಕೆಳಗಿನ ಎಮ್ಮೆಗಳು) ಹತ್ಯೆಯನ್ನು ಮಾತ್ರವಲ್ಲದೆ ಹತ್ಯೆಗಾಗಿ ಜಾನುವಾರುಗಳನ್ನು ಸಾಗಿಸುವುದನ್ನು ಸಹ ನಿಷೇಧಿಸುತ್ತದೆ. ಜಾನುವಾರುಗಳನ್ನು ಸಾಗಿಸುವುದು ಹತ್ಯೆಯ ಸಂಭವನೀಯ ಕ್ರಿಯೆಗೆ ಮುಂಚಿತವಾಗಿ ನಡೆಯುವ ಚಟುವಟಿಕೆಯಾಗಿರುವುದರಿಂದ ಸಾರಿಗೆಯ ಉದ್ದೇಶಿತ ನಿರ್ಣಯವು ಕೆಲವು ಆಂತರಿಕ ತೊಂದರೆಗಳನ್ನುಂಟು ಮಾಡುತ್ತದೆ, ಏಕೆಂದರೆ ಇದು ಕಾನೂನಿನ ಅಡಿಯಲ್ಲಿ ಸಮರ್ಥನೀಯವಾಗಿರುತ್ತದೆ. ಜಾನುವಾರುಗಳ ಸಾಗಣೆಯ ಉದ್ದೇಶವನ್ನು ವ್ಯಾಖ್ಯಾನಿಸುವ 2020 ರ ಈ ಕಾಯಿದೆಯು "ಕೃಷಿ ಅಥವಾ ಪಶು ಸಂಗೋಪನೆ ಉದ್ದೇಶಕ್ಕಾಗಿ" ಮಾತ್ರವೇ ಎಂದು ಹೇಳುವ ಮೂಲಕ, ಜಾನುವಾರುಗಳನ್ನು ಸಾಗಿಸುತ್ತಿರುವವರ ಉದ್ದೇಶ ಈ ವ್ಯಾಖ್ಯಾನದೊಳಗೆ ಇರಬೇಕು ಎನ್ನುತ್ತಾ ಅದರ ಪ್ರಕ್ರಿಯಾತ್ಮಕ ಭಾರವನ್ನು ಹಾಗೂ ದಾಖಲೆಗಳ ಹೊಣೆಯನ್ನು ಸಾಗಿಸುವವರ ಮೇಲೆ ಹಾಕುತ್ತದೆ.

ಇದರ ಹೊರತು ಇನ್ನ್ಯಾವುದೇ ರೀತಿಯ ಜಾನುವಾರು ಸಾಗಣೆಯನ್ನು ನಿಷೇಧಿಸಲಾಗಿದ್ದು, ಒಂದು ವೇಳೆ ಕಂಡು ಬಂದರೆ ಅದಕ್ಕೆ ಕನಿಷ್ಟ 3 ವರ್ಷಗಳ ಜೈಲು ಶಿಕ್ಷೆ ವಿಧಿಸಬಹುದು ಎಂಬ ನಿಯಮವನ್ನು ರೂಪಿಸಲಾಗಿದೆ. ಇದರ ಅರ್ಥ ಖಾಯಿಲೆ ಬಿದ್ದಿರುವ ಪ್ರಾಣಿಯನ್ನು ಹೊಂದಿರುವ ರೈತನೊಬ್ಬ ಅದನ್ನು ಸಾಗಿಸುವ ಸಲುವಾಗಿ ಸಾಗಣೆ ದಾಖಲಾತಿಗಳಿಗಾಗಿ ಪಶುವೈದ್ಯಾಧಿಕಾರಿಯನ್ನು ಹುಡುಕಿಕೊಂಡು ಹೋಗಬೇಕು. ಒಂದು ವೇಳೆ ಪಶುವೈದ್ಯಾಧಿಕಾರಿ ಸಿಗದ ಸಂದರ್ಭದಲ್ಲಿ ಆ ರೈತ ಒಂದೋ ತನ್ನ ಜಾನುವಾರು ಸಾಯಲು ಬಿಡಬೇಕು ಅಥವಾ 3 ವರ್ಷ ಜೈಲಿಗೆ ಹೋಗುವ ಅಪಾಯವನ್ನು ತೆಗೆದುಕೊಳ್ಳಬೇಕು. ಉದಾಹರಣೆಗೆ, ಒಂದು ರೈತ ಪಕ್ಕದ ಗ್ರಾಮದ ಮತ್ತೊಬ್ಬ ರೈತನಿಂದ ಜಾನುವಾರನ್ನು ಖರೀದಿಸಿ, ಅದೇ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ತನ್ನ ಊರಿಗೆ ಅದನ್ನು ಸಾಗಿಸಬೇಕು ಎಂದರೂ ಸಹ ಆತ ಪಶುವೈದ್ಯಾಧಿಕಾರಿಯಿಂದ ಕಾನೂನಾತ್ಮಕವಾಗಿ ಅಗತ್ಯ ದಾಖಲೆಗಳನ್ನು ಪಡೆಯಬೇಕಿದೆ. ಹೀಗೆ, 2020 ರ ಕಾಯಿದೆಯ ಅಡಿಯಲ್ಲಿರುವ ನಿಯಮಗಳು ದೈನಂದಿನ ಜಾನುವಾರು ವ್ಯಾಪಾರವನ್ನು ನಿಷೇಧಾತ್ಮಕವಾಗಿ ಕಷ್ಟಕರ ಹಾಗೂ ಅಪಾಯಕಾರಿ ಮಾಡುತ್ತವೆ.[1]

ಬೀಫ್ ಸೇವಿಸುವುದು, ಮಾರಾಟ ಮಾಡುವುದು ಅಥವಾ ವಶದಲ್ಲಿ ಹೊಂದಿರುವುದನ್ನು ನಿಷೇಧಿಸದೆ ಇದ್ದರೂ ಸಹ ಹಲವು ಪ್ರಕರಣಗಳಲ್ಲಿ ಕಾನೂನನ್ನು ಉಲ್ಲಂಘಿಸಿದ್ದಾರೆ ಎಂಬ ಸಂಶಯದ ಮೇಲೆ ಭೀಫ್ ಹೊಂದಿರುವವರ ಅಥವಾ ಭೀಫ್ ಮಾರಾಟ ಮಾಡುವವರ ವಿರುದ್ಧ ಈ ಕಾಯಿದೆಯನ್ನು ಹೊರಿಸಲಾಗಿದೆ. (ಇಂತಹ ಪ್ರಕರಣಗಳ ಉದಾಹರಣೆಗಳಿಗಾಗಿ ಅನುಬಂಧವನ್ನು ನೋಡಿ). 2020 ರ ಈ ಕಾಯಿದೆಯು ಜಾರಿಗೆ ಬಂದ ನಂತರ ನೈತಿಕ ಪೊಲೀಸ್‌ಗಿರಿ ಹೆಚ್ಚಾಗಿದ್ದು, ಯಾವುದೇ ಅಂಜಿಕೆಯಿಲ್ಲದೆ ಹೆದ್ದಾರಿಗಳಲ್ಲಿ ಗೂಂಡಾಗಳು ಆಯುಧಗಳನ್ನು ಹಿಡಿದುಕೊಂಡು ಗಸ್ತು ತಿರುಗುವುದು, ಮೂಲೆಗಳಲ್ಲಿ ಅವಿತುಕೊಂಡಿದ್ದು ಜಾನುವಾರು ಸಾಗಾಟ ಮಾಡುವ ವ್ಯಾಪಾರಿಗಳ ಮೇಲೆ ದಾಳಿ ಮಾಡುವುದು ಹೆಚ್ಚಾಗಿದೆ.

[1] ಆಹಾರ ನಮ್ಮ ಹಕ್ಕು ಅವರ ವರದಿಯನ್ನು ನೋಡಿ - ಜೀವನೋಪಾಯಗಳನ್ನು ಅಪರಾಧೀಕರಿಸುವುದು, ಸ್ವಘೋಷಿತ ಜಾಗೃತದಳವನ್ನು ಕಾನೂನಾತ್ಮಕಗೊಳಿಸುವುದು*: ಕರ್ನಾಟಕ ಜಾನುವಾರು ಹತ್ಯೆ ತಡೆಗಟ್ಟುವಿಕೆ ಹಾಗೂ ಸಂರಕ್ಷಣೆ ಕಾಯಿದೆ, 2020* ರ ಪ್ರತಿಕೂಲ ಪರಿಣಾಮಗಳು - ಇದು ಕರ್ನಾಟಕದಲ್ಲಿನ ಜಾನುವಾರು ಮಾರುಕಟ್ಟೆಗಳ ಮೇಲೆ ಈ ಕಾಯ್ದೆಯ ಹೇಗೆ ನಕಾರಾತ್ಮಕ ಪರಿಣಾಮ ಬೀರಿದೆ ಹಾಗೂ ಕರ್ನಾಟಕದ ಡೈರಿ ಉದ್ಯಮ, ಕೃಷಿ, ಮಾಂಸ ಹಾಗೂ ಚರ್ಮ ಕೈಗಾರಿಕೆಗಳ ಮೇಲೆ ಹೇಗೆ ಪ್ರತಿಕೂಲ ಪರಿಣಾಮ ಬೀರಿದೆ ಎಂಬುದನ್ನು ವಿವರಿಸುತ್ತದೆ.

# ಕೃತ್ಯಗಳ ಸಂಕ್ಷಿಪ್ತ ವಿವರಣೆ

ಮಾರ್ಚ್ 30 ಮತ್ತು ಏಪ್ರಿಲ್ 01 ರ ನಡುವಿನ ರಾತ್ರಿ 12 ಗಂಟೆ ಮಧ್ಯರಾತ್ರಿಗೂ ಮುಂಚೆ, 16 ಜಾನುವಾರಗಳನ್ನು ಸಾಗಿಸಿಕೊಂಡು ಶ್ರೀ ಜಹೀರ್ ಪಾಷಾ ಅವರು ವಾಹನವನ್ನು ಚಲಾಯಿಸುತ್ತಾ ಶ್ರೀ ಇರ್ಫಾನ್ ಮತ್ತು ಶ್ರೀ ಇದ್ರಿಸ್ ಪಾಷಾ ಅವರ ಜೊತೆ ಬರುತ್ತಿದ್ದಾಗ ಸಾತನೂರಿನ ಸಂತೆಮೇಳ ಸರ್ಕಲ್ ಬಳಿ ಶ್ರೀ ಪುನೀತ್ ಕೆರೆಹಳ್ಳಿ ಮತ್ತು ಆತನ 5 ಜನ ಸಹಚರರು ಇವರ ವಾಹನವನ್ನು ಅಡ್ಡಗಟ್ಟಿ ನಿಲ್ಲಿಸಿರುತ್ತಾರೆ. ಸತ್ಯ ಶೋಧನಾ ತಂಡಕ್ಕೆ ನೀಡಿದ ಹೇಳಿಕೆಗಳ ಪ್ರಕಾರ, ಶ್ರೀ ಪುನೀತ್ ಕೆರೆಹಳ್ಳಿ ಮತ್ತು ಆತನ ಸಹಚರರು ತಮ್ಮ ಕೈಗಳಲ್ಲಿ ದೊಣ್ಣೆಗಳು ಹಾಗೂ ಕ್ರಿಕೆಟ್ ವಿಕೆಟ್‌ಗಳನ್ನು ಹೊಂದಿದ್ದರು. ಜಾನುವಾರುಗಳನ್ನು ಸಾಗಿಸುವ ವಾಹನಗಳನ್ನು ಹಿಡಿಯಲೆಂದು ಅವರು ಅಲ್ಲಿ ಬೀಡುಬಿಟ್ಟಿದ್ದರು ಹಾಗೂ ಅವರು ಇಂತಹ ಕೃತ್ಯಗಳಲ್ಲಿ ತೊಡಗಿರುವುದು ಇದೇ ಮೊದಲಲ್ಲ. ಈ ಕೃತ್ಯ ನಡೆದ ಸ್ಥಳ ಸಾತನೂರು ಪೊಲೀಸ್ ಠಾಣೆಗಿಂತ 600 ಮೀಟರ್‌ಗಿಂತ ಹೆಚ್ಚು ದೂರವಿಲ್ಲ. ಆ ದಿನ ರಾತ್ರಿ ಕೇವಲ ಮೂರು ಜನ ಪೊಲೀಸ್ ಸಿಬ್ಬಂಧಿಗಳು ಮಾತ್ರ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು ಎಂದು ಪೊಲೀಸ್ ಅಧೀಕ್ಷಕರು ನಮಗೆ ಹೇಳಿರುತ್ತಾರೆ. ಇದಕ್ಕೂ ಮುಂಚೆ ಗಸ್ತು ತಿರುಗಲು ಹೋಗಿದ್ದ ವಾಹನವು ಶ್ರೀ ಪುನೀತ್ ಕೆರೆಹಳ್ಳಿಯವರ ವಾಹನವನ್ನು ನೋಡಿರಲಿಲ್ಲ.

ವಾಹನವನ್ನು ನಿಲ್ಲಿಸಿದ ನಂತರ ಅದರಲ್ಲಿ ಜಾನುವಾರುಗಳನ್ನು ಸಾಗಿಸಲಾಗುತ್ತಿದೆ ಎಂದು ಶ್ರೀ ಪುನೀತ್ ಕೆರೆಹಳ್ಳಿ ಹೇಳುತ್ತಾನೆ. ಇದನ್ನು ನಿರಾಕರಿಸಿದ ಡ್ರೈವರ್, ಜಾನುವಾರುಗಳನ್ನು ಖರೀದಿಸಿದ್ದಕ್ಕೆ ಅವರ ಬಳಿ ಆರ್‌ಎಂಸಿ ಯಾರ್ಡ್‌ನಿಂದ ಪಡೆಯಲಾದ ರಶೀದಿಗಳು ಇದೆ ಎಂದು ಹೇಳಿದ ನಂತರವೂ ಸಹ ಇದನ್ನು ಕೇಳದ ಶ್ರೀ ಪುನೀತ್ ಕೆರೆಹಳ್ಳಿ ಜಾನುವಾರುಗಳ ಮಾಲೀಕನಿಗೆ ಫೋನ್ ಮಾಡಿ, 2 ಲಕ್ಷ ರೂಪಾಯಿಗಳನ್ನು ಕಳುಹಿಸುವಂತೆ ಹೇಳು ಎಂದು ಬೆದರಿಸುತ್ತಾನೆ. ಈ ಬೇಡಿಕೆಗೆ ಒಪ್ಪದ ಶ್ರೀ ಇದ್ರಿಸ್ ಪಾಷಾ, ಚಾಲಕನಿಗೆ ವಾಹನ ಚಲಾಯಿಸುವುದಕ್ಕೆ ಹೇಳುತ್ತಾರೆ. ಪೊಲೀಸ್ ಠಾಣೆಯ ಮೂಲಕ ಹಾದು ಹೋಗುವ ರಸ್ತೆಗೆ ವಾಹನ ಬಲ ತಿರುವು ಪಡೆದುಕೊಂಡಾಗ ಅದು 100 ರಿಂದ 200 ಮೀಟರ್ ತಲುಪುವಷ್ಟರಲ್ಲಿ ಶ್ರೀ ಪುನೀತ್ ಕೆರೆಹಳ್ಳಿ ಮತ್ತು ಆತನ ಸಹಚರರು ವಾಹನವನ್ನು ತಮ್ಮ ಕೈಗಳಲ್ಲಿ ದೊಣ್ಣೆಗಳು ಹಾಗೂ ಕ್ರಿಕೆಟ್ ವಿಕೆಡ್‌ಗಳನ್ನು ತಿರುಗಿಸುತ್ತಾ, ಅಡ್ಡಗಟ್ಟಿ ನಿಲ್ಲಿಸುತ್ತಾರೆ.

ಈ ಸಂಧರ್ಭದಲ್ಲಿ ವಾಹನದಲ್ಲಿದ್ದ ಮೂವರು ಸಹ ದಾಳಿಕೋರರಿಂದ ಪರಾರಿಯಾಗಲು ಯತ್ನಿಸುತ್ತಾರೆ. ವಾಹನ ಎಡ ಬಾಗಿಲಿನ ಬಳಿ ಕುಳಿತಿದ್ದ ಶ್ರೀ ಇರ್ಫಾನ್ ಮೊದಲು ಓಡುತ್ತಾರೆ, ತದನಂತರ ಇದ್ರಿಸ್ ಪಾಷಾ ಓಡಲು ಆರಂಭಿಸುತ್ತಾರೆ. ಈ ಇಬ್ಬರೂ ಕತ್ತಲೆಯಲ್ಲಿ ಜೀವ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿರುವಾಗ, ದಾಳಿಕೋರರು ಅವರ ಬೆನ್ನಟ್ಟುತ್ತಾರೆ. ಶ್ರೀ ಇರ್ಫಾನ್ ದಾಳಿಕೋರರಿಂದ ತಪ್ಪಿಸಿಕೊಳ್ಳಲು ಸಫಲರಾಗುತ್ತಾರೆ ಆದರೆ ಶ್ರೀ ಇದ್ರಿಸ್ ಪಾಷಾ ಅವರನ್ನು ಬೆನ್ನಟ್ಟಿ ಹಿಡಿದ ದಾಳಿಕೋರರು ಅವರನ್ನು ಭೀಕರವಾಗಿ ಥಳಿಸುತ್ತಾರೆ. ಅವರ ಕೈಬೆರಳುಗಳ ಮೇಲೆ ಇದ್ದ ಬಾಹ್ಯ ಗುರುತುಗಳು ಅವರ ಮೇಲೆ ಹಲ್ಲೆ ನಡೆಸಲು ವಿದ್ಯುತ್ ಶಾಕ್ ಅನ್ನು ನೀಡಿರುವ ಸಾಧ್ಯತೆ ಇದೆ ಎಂಬುದನ್ನು ಸೂಚಿಸುತ್ತವೆ.

ಈ ನಡುವೆ, ಶ್ರೀ ಜಹೀರ್ ಅವರು ದಾಳಿಕೋರರಿಂದ ತಪ್ಪಿಸಿಕೊಂಡು ಅವಿತುಕೊಂಡಿರುತ್ತಾರೆ. ಅಕ್ಕಪಕ್ಕದಲ್ಲಿ ಯಾವುದೇ ಸದ್ದು ಅವರಿಗೆ ಕೇಳಿಸದಿದ್ದಾಗ, ಅವರು ಹೊರಬರುತ್ತಾರೆ. ಅವರು ಹೊರ ಬರುತ್ತಲೇ ಅವರನ್ನು ಹಿಡಿದುಕೊಂಡ ದಾಳಿಕೋರರು, ಅವರನ್ನು ಹಿಗ್ಗಾಮುಗ್ಗ ಥಳಿಸುತ್ತಾರೆ. ಈ ಸಮಯದಲ್ಲಿ ಎಂಟಿಎಂನಿಂದ ಹಣ ತೆಗೆಯಲು ಅಲ್ಲಿಗೆ ಬಂದಿದ್ದ ಸಾತನೂರು ಪೊಲೀಸ್ ಠಾಣೆಯ ಸಿಬ್ಬಂಧಿಯೊಬ್ಬರು ಒಬ್ಬ ದಾಳಿಕೋರನನ್ನು ಹಾಗೂ ಶ್ರೀ ಜಹೀರ್ ಅವರನ್ನು ಅವರ ದ್ವಿಚಕ್ರ ವಾಹನದ ಮೇಲೆ ಪೊಲೀಸ್ ಠಾಣೆಗೆ ಕರೆದೊಯ್ಯುತ್ತಾರೆ. ಇನ್ನುಳಿದ ದಾಳಿಕೋರರು ಇವರಿಂದ ತಪ್ಪಿಸಿಕೊಂಡ ವಾಹನದ ಇನ್ನಿಬ್ಬರನ್ನು ಹುಡುಕಲು ಹೋಗುತ್ತೇವೆ ಎಂದು ಮಾತನಾಡಿಕೊಳ್ಳುವಾಗ ಕೇಳಿಸಿದೆ. ವ್ಯಕ್ತಿಗಳು ವಿವರಿಸಿದ ಘಟನೆಗಳು ಹಾಗೂ ಅಧಿಕಾರಿಗಳನ್ನು ಸಂದರ್ಶಿಸಿ ಪಡೆದುಕೊಂಡ ಹೇಳಿಕೆಗಳ ಪ್ರಕಾರ, ಸತ್ಯ ಶೋಧನಾ ತಂಡಕ್ಕೆ ತಿಳಿದು ಬಂದ ವಿಚಾರವೆಂದರೆ ಇನ್ನುಳಿದ ದಾಳಿಕೋರರನ್ನು ನಿಲ್ಲಿಸಲು ಅಥವಾ ಅವರನ್ನು ಬಂಧಿಸಲು ಸಾತನೂರು ಪೊಲೀಸರು ಯಾವುದೇ ಪ್ರಯತ್ನವನ್ನು ಮಾಡಿರುವುದಿಲ್ಲ ಎಂಬುದು ಸ್ಪಷ್ಟವಾಗಿದೆ. ಪೊಲೀಸ್ ಠಾಣೆಯ ಅಂಗಳದಿಂದಲೇ ಈ ದಾಳಿಕೋರರು ಫೇಸ್‌ಬುಕ್ ಲೈವ್ ಮಾಡಿದ್ದಾರೆ. ಇನ್ನಿಬ್ಬರು ಸಂತ್ರಸ್ಥರನ್ನು ಹುಡುಕಿ, ಅವರುಗೆ ಸೂಕ್ತ ರಕ್ಷಣೆ ನೀಡುವ ಪ್ರಯತ್ನವನ್ನೂ ಸಹ ಈ ಪೊಲೀಸರು ಮಾಡಿರುವುದಿಲ್ಲ ಎಂಬುದು ಸ್ಪಷ್ಟವಾಗಿದೆ. ಆ ಪ್ರದೇಶದ ನಿವಾಸಿಗಳು ಬೆಳಿಗ್ಗೆ ಪೊಲೀಸ್ ಠಾಣೆಯಿಂದ ಕೇವಲ 500 ಮೀಟರ್ ದೂರದಲ್ಲಿ ಬಿದ್ದಿದ್ದ ಶ್ರೀ ಇದ್ರಿಸ್ ಪಾಷಾ ಅವರ ಮೃತ ದೇಹವನ್ನು ಕಂಡು, ಮಾಹಿತಿ ನೀಡಿರುತ್ತಾರೆ.

ಈ ಕೃತ್ಯದ ಕುರಿತು ದಾಖಲಾದ ಮೊದಲ ಎಫ್‌ಐಆರ್ (ಸಿಆರ್ 0052/2023, ಮುಂಜಾನೆ 1:00 ಗಂಟೆ, 01-04-2023) ಪೊಲೀಸ್ ಠಾಣೆಯಿಂದ ಕೇವಲ 500 ಮೀಟರ್ ದೂರದಲ್ಲಿ ಬಹಿರಂಗವಾಗಿ ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡ ದಾಳಿಕೋರರ ಮೇಲೆ ಆಗಿದ್ದಲ್ಲ ಬದಲಿಗೆ ದಾಳಿಯ ಸಂತ್ರಸ್ಥರ ಮೇಲೆ ಆದದ್ದು! ಎರಡನೇ ಎಫ್‌ಐಆರ್ (ಸಿಆರ್ 0053/2023, ಬೆಳಿಗ್ಗೆ 5:30, 01-04-2023) ಮೊದಲ ಎಫ್‌ಐಆರ್ ಆದ 4.5 ಗಂಟೆಗಳ ನಂತರ ಆರೋಪಿಗಳ ಮೇಲೆ ದಾಖಲಾಯಿತು. ಇಷ್ಟೊತ್ತಿಗಾಗಲೇ ಆರೋಪಿಗಳು ಪೊಲೀಸ್ ಸ್ಟೇಷನ್‌ನಿಂದ ಹೊರಡು ಹೋಗುವಂತೆ ಮಾಡಲಾಗಿತ್ತು. ಬೆಳಗ್ಗಿನ ಸಮಯದಲ್ಲಿ ಶ್ರೀ ಇದ್ರಿಸ್ ಪಾಷಾರವರ ಮೃತ ದೇಹವನ್ನು ಕಂಡು ಹಿಡಿಯುವ ಹೊತ್ತಿಗೆ ಆರೋಪಿಗಳು ಪೊಲೀಸರ ಕೈಗೆಟುಕದೆ ಪರಾರಿಯಾಗಿದ್ದರು. ಮೂರನೇ ಎಫ್‌ಐಆರ್ (ಸಿಆರ್ 0054/2023, 16:00 ಗಂಟೆಗಳು, 01-04-2023) ಅನ್ನು ಸಂಜೆ ಶ್ರೀ ಇದ್ರಿಸ್ ಪಾಷಾ ಅವರ ಸಹೋದರ ನೀಡಿದ ಮೇರೆಗೆ ದಾಖಲಿಸಲಾಯಿತು. ಎಫ್‌ಐಆರ್ ದಾಖಲಾದ ಕ್ರಮಗಳೇ ಹೇಳುತ್ತವೆ ಪೊಲೀಸ್ ಸಿಬ್ಬಂಧಿಯೊಬ್ಬರು ಕಣ್ಣಾರೆ ಕಂಡ ಹಲ್ಲೆಯ ನಂತರವೂ ಸಹ ಸಂತ್ರಸ್ಥರ ದೂರನ್ನು ಪರಿಗಣಿಸದೆ ಮೊದಲು ದಾಳಿಕೋರರ ದೂರನ್ನು ಪುರಸ್ಕರಿಸಲಾಗಿದೆ.

ಈ ಪ್ರಶ್ನೆಗಳನ್ನು ಪೊಲೀಸ್ ಅಧೀಕ್ಷಕರ (ರಾಮನಗರ) ಮುಂದಿಟ್ಟಾಗ ಆ ಸಂಧರ್ಭದಲ್ಲಿ ಕೇವಲ ಬೆರಳೆಣಿಕೆಯಷ್ಟು (ಮೂರು) ಪೊಲೀಸ್ ಸಿಬ್ಬಂಧಿ ಲಭ್ಯವಿದ್ದು, ಆ ಸನ್ನಿವೇಷದಲ್ಲಿ ದೊರಕಿದ ಮಾಹಿತಿ ಹಾಗೂ ಸಂಪನ್ಮೂಲಗಳನ್ನು ಬಳಸಿಕೊಂಡು ಕಾರ್ಯನಿರ್ವಹಿಸಿದ್ದಾರೆ ಎಂದು ಉತ್ತರಿಸಿದ, ಪೊಲೀಸ್ ಅಧೀಕ್ಷಕರು “ಹಿನ್ನೋಟದ ಅನುಕೂಲವಿದೆ ಎಂಬ ಮಾತ್ರಕ್ಕೆ ಕೃತ್ಯಗಳ ಪೋಸ್ಟ್ ಮಾರ್ಟಂ ಮಾಡಬಾರದು,” ಎಂದೂ ಸಹ ಹೇಳುತ್ತಾರೆ. ಯಾವುದೇ ನಾಗರೀಕರು ಕಾನೂನನ್ನು ಎಂತದ್ಧೇ ಪರಿಸ್ಥಿತಿಯಲ್ಲಿ ಕೈಗೆ ತೆಗೆದುಕೊಳ್ಳಬಾರದು; ಯಾವುದೇ ಒಂದು ಅಪರಾಧ ನಡೆಯುತ್ತಿರುವುದನ್ನು ಅವರು ನೋಡಿದರೆ ತಕ್ಷಣವೇ ಪೊಲೀಸರ ಗಮನಕ್ಕೆ ತರಬೇಕು; ಆದರೆ ಯಾವುದೇ ಸಂದರ್ಭದಲ್ಲಿ ಕಾನೂನು ಕೈಗೆ ತೆಗೆದುಕೊಳ್ಳಬಾರದು ಎಂಬುದನ್ನು ಪೊಲೀಸ್ ಅಧೀಕ್ಷಕರು ಒತ್ತಿ ಹೇಳಿದರು. ಇದು ನಿಜವೇ ಆದರೆ, ಯಾಕೆ ಸಾತನೂರು ಪೊಲೀಸರು ತಕ್ಷಣವೇ ದಾಳಿಕೋರರನ್ನು ಪೊಲೀಸ್ ಠಾಣೆಯಲ್ಲಿಯೇ ಬಂಧಿಸಲಿಲ್ಲ? ಇದು ಇದ್ರಿಸ್ ಪಾಷಾ ಅವರ ಪ್ರಾಣವನ್ನು ಕಾಪಾಡಬಹುದಾಗಿತ್ತು ಅಥವಾ ಸಮಯಕ್ಕೆ ಸರಿಯಾಗಿ ಅವರನ್ನು ಆಸ್ಪತ್ರೆಗೆ ಸೇರಿಸಲಾದರೂ ನೆರವಾಗುತ್ತಿತ್ತು.

# ಗಮನಿಸಲಾದ ಪ್ರಮುಖ ಅಂಶಗಳು

ಈ ಮೇಲಿನ ಹೇಳಿಕೆಗಳು ಹಾಗೂ ಸತ್ಯಾಂಶಗಳಿಂದ ಕಂಡುಬರುವುದೇನೆಂದರೆ, ಹಣ ಸುಲಿಗೆ ಮಾಡುವ ಹಾಗೂ ಮುಸ್ಲಿಂ ಸಮುದಾಯವನ್ನು ಗುರಿಯಾಗಿಸಿ, ದಾಳಿ ನಡೆಸುವ ಉದ್ದೇಶದಿಂದ ಸಮಾಜ-ವಿರೋಧಿ ಗುಂಪುಗಳು ಬಹಿರಂಗವಾಗಿ ಕಾನೂನನ್ನು ಕೈಗೆತ್ತಿಕೊಂಡಿವೆ. ಪೊಲೀಸರ ಯಾವುದೇ ಭಯವಿಲ್ಲದೆ ಪೊಲೀಸ್ ಠಾಣೆಯ ಹತ್ತಿರವೇ ಮೂರು ಜನ ನಾಗರೀಕರ ಮೇಲೆ ದೈಹಿಕ ಹಲ್ಲೆ ನಡೆಸಿದ್ದಾರೆ. ಆದರೆ ಪೊಲೀಸರು ತಕ್ಷಣವೇ ಈ ದಾಳಿಕೋರರನ್ನು ಬಂಧಿಸುವ ಬದಲು ಇನ್ನುಳಿದ ಸಂತ್ರಸ್ಥರನ್ನು ಹುಡುಕಲು ದಾಳಿಕೋರರನ್ನು ಬಿಟ್ಟಿದ್ದಾರೆ. ಪೊಲೀಸ್ ಠಾಣೆಯ ಸಿಬ್ಬಂಧಿಯೊಬ್ಬರು ಸಂತ್ರಸ್ಥರ ಮೇಲೆ ನಡೆಯುತ್ತಿದ್ದ ಹಲ್ಲೆಯನ್ನು ಕಣ್ಣಾರೆ ಕಂಡ ನಂತರ ಹಾಗೂ ಪೊಲೀಸ್ ಠಾಣೆ ಹೊರಗೆ ಸ್ವತಃ ದಾಳಿಕೋರರೇ ಫೇಸ್‌ಬುಕ್ ಲೈವ್ ಮಾಡಿದರೂ ಸಹ ದಾಳಿಕೋರರನ್ನು ಬಂಧಿಸಿರುವುದಿಲ್ಲ. ಸತ್ಯ ಶೋಧನಾ ತಂಡವು ಸಂಗ್ರಹಿಸಿದ ಹೇಳಿಕೆಗಳ ಆಧಾರದ ಮೇಲೆ, ಈ ಕೆಳಗಿನ ಅಂಶಗಳನ್ನು ನಿಮ್ಮ ಅವಗಾಹನೆಗೆ ತರಲಿಚ್ಛಿಸುತ್ತೇವೆ:-

01 ವಾಹನಗಳನ್ನು ಅಡ್ಡಗಟ್ಟಿ ನಿಲ್ಲಿಸಿ, ಪೊಲೀಸ್ ಠಾಣೆಯ ಹತ್ತಿರವೇ ಹಣ ಸುಲಿಗೆ ಮಾಡುವುದು ಹಾಗೂ ಪೊಲೀಸರು ಸಂತ್ರಸ್ಥರ ರಕ್ಷಣೆಗೆ ಕಾಳಜಿ ವಹಿಸದಿರುವುದು ಈ ಗೂಂಡಾಗಳು ಎಷ್ಟು ನಿರ್ಭೀತಿಯಿಂದ ಇದನ್ನೆಲ್ಲಾ ಮಾಡುತ್ತಿದ್ದಾರೆ ಎಂಬುದನ್ನು ಸೂಚಿಸುತ್ತದೆ. ತಕ್ಷಣವೇ ಪೊಲೀಸರು ಎಲ್ಲಾ ದಾಳಿಕೋರರನ್ನು ಬಂಧಿಸಿ, ಸಂತ್ರಸ್ಥರನ್ನು ಹುಡುಕಿದ್ದರೆ, ಇದ್ರಿಸ್ ಪಾಷಾ ಅವರ ಪ್ರಾಣವನ್ನು ಉಳಿಸುವುದು ಸಾಧ್ಯವಿತ್ತು. ಇದಕ್ಕೂ ಮುಂಚೆ ಇಂತದ್ದೇ ಕೃತ್ಯಗಳಲ್ಲಿ ಪುನೀತ್ ಕೆರೆಹಳ್ಳಿ ಮತ್ತು ಆತನ ಸಹಚರರು ತೊಡಗಿಸಿಕೊಂಡಿರುವುದು ಪದೇ ಪದೇ ಅಪರಾಧಗಳನ್ನು ಮಾಡುವ ಅಪರಾಧಿಗಳನ್ನು ಸೆದೆ ಬಡಿಯುವಲ್ಲಿ ಪೊಲೀಸರ ನಿಷ್ಕ್ರಿಯತೆ ಹಾಗೂ ವೈಫಲ್ಯತೆ ಸ್ಪಷ್ಟವಾಗುತ್ತದೆ.

02 ಆರೋಪಿಯ ಮೇಲೆ ಹಣ ಸುಲಿಗೆ ಯತ್ನದಂತಹ ಆರೋಪಗಳಿದ್ದರೂ ಸಹ, ಮೂರನೇ ಎಫ್‌ಐಆರ್ (ಸಿಆರ್ 0054/2023) ನಲ್ಲಿ ಭಾರತೀಯ ದಂಡ ಸಂಹಿತೆಯ ಪ್ರಮುಖ ಸೆಕ್ಷನ್‌ಗಳನ್ನು ಸೇರಿಸಿರುವುದಿಲ್ಲ.

03 ಬದುಕುಳಿದ ಸಂತ್ರಸ್ಥರ ಸಹಿಗಳನ್ನು ಬಿಳಿ ಹಾಳೆಯ ಮೇಲೆ ಪೊಲೀಸರು ಪಡೆದುಕೊಂಡಿದ್ದಾರೆ ಎಂಬುದು ನಮ್ಮ ಗಮನಕ್ಕೆ ಬಂದಿದೆ.

04 ಬದುಕುಳಿದಿರುವ ಸಂತ್ರಸ್ಥರು ಪ್ರತ್ಯಕ್ಷ ಸಾಕ್ಷಿಗಳೂ ಸಹ ಆಗಿದ್ದು, ಅಪರಾಧ ಸ್ಥಳದ ಮಹಜರು ಸಂಧರ್ಭದಲ್ಲಿ ಹಾಜರಿರಲಿಲ್ಲ ಹಾಗೂ ಪೊಲೀಸರು ಸಿಆರ್‌ಪಿಸಿ ಸೆಕ್ಷನ್ 164 ರ ಪ್ರಕಾರ ಪ್ರತ್ಯಕ್ಷದರ್ಶಿಗಳನ್ನು ಹೇಳಿಕೆ ನೀಡಲು ಮ್ಯಾಜಿಸ್ಟ್ರೇಟ್ ಮುಂದೆ ಹಾಜರು ಪಡಿಸಲಿಲ್ಲ ಎಂಬುದು ನಮ್ಮ ಗಮನಕ್ಕೆ ಬಂದಿದೆ.

05 ಮೃತರ ಕುಟುಂಬಕ್ಕೆ ಪೋಸ್ಟ್ ಮಾರ್ಟಂ ವರದಿಯ ಪ್ರತಿಯನ್ನು ನೀಡಿರುವುದಿಲ್ಲ.

# ಶಿಫಾರಸ್ಸುಗಳು

ಈ ಮೇಲಿನ ಸತ್ಯಾಂಶಗಳು ಹಾಗೂ ಗಮನಿಸಲಾದ ಅಂಶಗಳ ಆಧಾರದ ಮೇಲೆ, ನಾವು ಈ ಕೆಳಗಿನ ಶಿಫಾರಸ್ಸುಗಳನ್ನು ಮಾಡಲಿಚ್ಛಿಸುತ್ತೇವೆ.

## ಪೊಲೀಸ್ ಇಲಾಖೆಗೆ

**01**

### ತನಿಖೆ

ಈ ಕೃತ್ಯದಲ್ಲಿ ಸ್ವತಂತ್ರ ಹಾಗೂ ನಿಷ್ಪಕ್ಷಪಾತ ತನಿಖೆ ನಡೆಯುವಂತೆ ಖಾತ್ರಿಪಡಿಸಿಕೊಳ್ಳಬೇಕು.

**02**

### ಪರಿಹಾರ

ಶ್ರೀ ಇದ್ರಿಸ್ ಪಾಷಾ ಅವರ ಕುಟುಂಬಕ್ಕೆ 10 ಲಕ್ಷ ರೂಪಾಯಿಗಳ ಪರಿಹಾರವನ್ನು ನೀಡಬೇಕು.

**03**

### ಪೋಸ್ಟ್ ಮಾರ್ಟಂ ವರದಿ

ತಕ್ಷಣವೇ ಪೋಸ್ಟ್ ಮಾರ್ಟಂ ವರದಿಯ ಪ್ರತಿ ಒಂದನ್ನು ಮೃತರ ಕುಟುಂಬಕ್ಕೆ ನೀಡಬೇಕು.

**04**

### ಪೊಲೀಸ್ ಠಾಣೆಗಳಿಗೆ ನಿರ್ದೇಶನಗಳು

ಕಾನೂನನ್ನು ಕೈಗೆತ್ತಿಕೊಳ್ಳುವ ಸಮಾಜ-ವಿರೋಧಿ ಅಂಶಗಳನ್ನು ತಕ್ಷಣವೇ ಬಂಧಿಸುವಂತೆ ಎಲ್ಲಾ ಪೊಲೀಸ್ ಠಾಣೆಗಳಿಗೆ ನಿರ್ದೇಶನವನ್ನು ನೀಡಬೇಕು.

**05**

### ಹೇಳಿಕೆಯನ್ನು ದಾಖಲಿಸಿಕೊಳ್ಳಬೇಕು

ತಕ್ಷಣವೇ ಸಿಆರ್‌ಪಿಸಿ ಸೆಕ್ಷನ್ 164 ರ ಅಡಿಯಲ್ಲಿ ಪ್ರತ್ಯಕ್ಷದರ್ಶಿಗಳ ಹೇಳಿಕೆಯನ್ನು ದಾಖಲಿಸಿಕೊಳ್ಳಬೇಕು.

**06**

### ಇಲಾಖಾ ತನಿಖೆ

ಈ ಕೃತ್ಯದಲ್ಲಿ ಉಂಟಾಗಿರುವ ಪೊಲೀಸ್ ವೈಫಲ್ಯದ ಕುರಿತು ಇಲಾಖಾ ತನಿಖೆಯನ್ನು ಆದೇಶಿಸಬೇಕು.

# ಶಿಫಾರಸ್ಸುಗಳು

## 07

### FIRಗಳ ಸುಮೊಟೋ ನೋಂದಣಿ

ಬೆದರಿಕೆಯನ್ನು ಹಾಕುವಂತಹ ವಿಡಿಯೋಗಳು, ಅಥವಾ ಹಿಂಸಾತ್ಮಕ ಕ್ರಿಯೆಗಳನ್ನು ಹಾಗೂ ಕಿರುಕುಳವನ್ನು ಪ್ರಚೋದಿಸುವ ಅಂಶಗಳು ಬೆಳಕಿಗೆ ಬಂದ ಕೂಡಲೇ, ಪೊಲೀಸರು ಅದನ್ನು ಪರಿಗಣನೆಗೆ ತೆಗೆದುಕೊಂಡು ಅವುಗಳ ವಿರುದ್ಧ ಸುಮೊಟೋ ಎಫ್ಐಆರ್‌ಗಳನ್ನು ದಾಖಲಿಸಬೇಕು.

## ರಾಜ್ಯ ಸರ್ಕಾರಕ್ಕೆ

## 01

### ಕಾಯಿದೆಯನ್ನು ರದ್ದುಗೊಳಿಸಿ

ಕರ್ನಾಟಕ ಜಾನುವಾರು ಹತ್ಯೆ ನಿಷೇಧ ಮತ್ತು ಸಂರಕ್ಷಣಾ ಕಾಯಿದೆ, 2020, ಜೀವನೋಪಾಯಗಳನ್ನು ನಾಶಮಾಡುತ್ತಿರುವ ಹಿನ್ನೆಲೆಯಲ್ಲಿ ಈ ಕಾಯಿದೆಯನ್ನು ತಕ್ಷಣವೇ ರದ್ದುಪಡಿಸಬೇಕು.

## 02

### ಪ್ರಕರಣಗಳನ್ನು ಹಿಂಪಡೆಯಿರಿ

2020ರ ಕಾಯ್ದೆಯಡಿ ದಾಖಲಾಗಿರುವ ಎಲ್ಲಾ ಪ್ರಕರಣಗಳನ್ನು ಹಿಂಪಡೆಯಿರಿ.

## 03

### ತಡೆಗಟ್ಟುವ ಕ್ರಮಗಳು

ದ್ವೇಷದ ಅಪರಾಧಗಳನ್ನು ಕೊನೆಗೊಳಿಸುವ ನಿಟ್ಟಿನಲ್ಲಿ ಇವುಗಳನ್ನು ತಡೆಗಟ್ಟುವ, ಪರಿಹಾರಾತ್ಮಕ ಹಾಗೂ ದಂಡನಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಖಾತ್ರಿಪಡಿಸಿಕೊಳ್ಳಲು ಘನತೆವೆತ್ತ ಸರ್ವೋಚ್ಚ ನ್ಯಾಯಾಲಯವು ತೆಹ್ಸೀನ್ ಪೂನಾವಾಲ ವರ್ಸಸ್ ಯೂನಿಯನ್ ಆಫ್ ಇಂಡಿಯಾ (ಎಐಆರ್ 2018 ಎಸ್‌ಸಿ 3354) ಪ್ರಕರಣದಲ್ಲಿ ನೀಡಿರುವ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ನೋಡಿಕೊಳ್ಳಬೇಕು. ಪ್ರತಿಯೊಂದು ಜಿಲ್ಲೆಯಲ್ಲಿ ಇಂತಹ ಕೃತ್ಯಗಳಿಗೆ ಕಡಿವಾಣ ಹಾಕಲು ನೋಡಲ್ ಅಧಿಕಾರಿಗಳನ್ನು ನೇಮಿಸುವುದು, ಯಾವುದೇ ತಡಮಾಡದೆ ಎಫ್ಐಆರ್‌ಗಳನ್ನು ದಾಖಲಿಸುವುದು, ಸಂತ್ರಸ್ಥರ ಕುಟುಂಬಸ್ಥರ ಮೇಲೆ ಆಗುವ ದೌರ್ಜನ್ಯವನ್ನು ತಡೆಗಟ್ಟುವುದು, ಪ್ರತಿ ದಿನದ ಆಧಾರದ ಮೇಲೆ ಫಾಸ್ಟ್ ಟ್ರ್ಯಾಕ್ ನ್ಯಾಯಾಲಯಗಳು ಗುಂಪು ಹಿಂಸೆಯಂತಹ ಪ್ರಕರಣಗಳನ್ನು ಇತ್ಯರ್ಥಪಡಿಸುವ ಕುರಿತು ಖಾತ್ರಿಪಡಿಸಿಕೊಳ್ಳುವುದು, ಸಂತ್ರಸ್ಥ ಪರಿಹಾರ ಯೋಜನೆಯನ್ನು ಪರಿಚಯಿಸುವುದು, ಈ ಹಿಂಸೆಗಳನ್ನು ತಡೆಗಟ್ಟುವಲ್ಲಿ ವಿಫಲವಾಗುವ ಪೊಲೀಸ್ ಅಧಿಕಾರಿಗಳನ್ನು ಹೊಣೆಗಾರರನ್ನಾಗಿಸುವುದು ಸುಪ್ರೀಂ ಕೋರ್ಟ್ ನೀಡಿರುವ ಇನ್ನಿತರ ನಿರ್ದೇಶನಗಳಲ್ಲಿ ಪೈಕಿ ಕೆಲವು ಅಂಶಗಳಾಗಿವೆ.

# ಸತ್ಯಶೋಧನಾ ತಂಡ

## ಸತ್ಯಶೋಧನಾ ತಂಡದ ಸದಸ್ಯರು

ಸತ್ಯಶೋಧನಾ ತಂಡವು ಈ ಕೆಳಗಿನ ಸದಸ್ಯರನ್ನು ಒಳಗೊಂಡಿತ್ತು:-

ವಕೀಲ ಶಿವಮಾನಿತನ್ (s28manithan@gmail.com)

ಸಿದ್ಧಾರ್ಥ್ ಕೆ ಜೆ (mailsiddj@gmail.com)

ಡಾ. ಸಿಲ್ವಿಯಾ ಕರ್ಪಗಂ

ಖಾಸಿಂ ಶೋಯೆಬ್ ಖುರೇಷಿ ಮತ್ತು ಅಖಿಲ ಭಾರತ ಜಮೈತುಲ್ ಖುರೇಷ್ (ಕರ್ನಾಟಕ) ಸದಸ್ಯರು

## Annexure: Illustrative List of Incidents of Violence after Passage of Karnataka Prevention of Slaughter and Preservation of Cattle Act, 2020 (Act 1 of 2021)

| S. No. | Date of Incident(s) | Place of Incident | Description | FIR No, Date and Time | Acts and Sections |
|---|---|---|---|---|---|
| 1 | 08-01-2021 | Tanikodu Check Post, Sringeri Taluka, Chikkamagaluru district | On 08-01-2021, the very first case after the passage of the Act was registered at the Sringeri PS against Shan. The complaint lodged at Sringeri PS stated that the constable at the Tanikodu check post was approached by five people in a Omni car asking if a vehicle carrying cows passed through the checkpost. When the constable said no, the unidentified five people took a u-turn and went towards Sringeri. Later, he heard a commotion, and saw a good carrier with 15-20 animals stationed at the check-post. A case was registered against the driver, later identified as Shan. Shan alleged that he was beaten up by unidentified individual, but it appears no FIR was filed for this assault. | Sringeri PS CR No. 02/2021 Date: 08-01-2021 Time: 5:30 am | KARNATAKA PREVENTION OF COW SLAUGHTER & CATTLE PREVENTION ACT-1964 (U/s-5,7,11) |
| 2 | 08-01-2021 | Kaimane, Sringeri Taluka, Chikkamagaluru district | On 08-01-2021, just after the above incident a second case was registered at the Sringeri PS against Abid Ali. A constable saw a goods carrier near Kaimane parked on the road while the driver of the vehicle, Abid Ali, was lying in an injured state. A case against Abid Ali under the new Act was registered. Abid Ali alleged that he was attacked by unidentified individuals. | Sringeri PS CR No. 03/2021 Date: 08-01-2021 Time: 8:30 am<br><br>Sringeri PS CR No. 04/2021 Date: 08-01-2021 Time: 9:30 am | KARNATAKA PREVENTION OF COW SLAUGHTER & CATTLE PREVENTION ACT-1964 (U/s-5,7,11)<br><br>IPC 1860 (U/s-341,504,392,326,307,427,34) |
| 3 | 03-07-2021 | Devadana, | On 03-07-2021 two Muslim men were accused of | Balehonnuru PS | IPC 1860 (U/s-379,429,34); |

| | | | | | |
|---|---|---|---|---|---|
| | | Chikkamagaluru district | stealing and killing a 1 year-old cow near Devadana village, Chikkamagalauru Taluka, Chikkamagaluru district falling under Balehonnuru PS, and were allegedly verbally abused and assaulted with hands and sticks. The police arrested the two men for violating Section 4 and 7 of the Ordinance (which had been notified as an Act by then) pertaining to slaughter and disposal of cattle. 5 men from the village were arrested for assault on the two Muslim men. | CR No: 49/2021; Date: 03-07-2021 Time: 11:30 AM | THE KARNATAKA PREVENTION OF SLAUGHTER AND PRESERVATION OF CATTLE ORDINANCE-2020 (U/s-4,7,12) |
| | | | | Balehonnuru PS CR No: 50/2021; Date: 03-07-2021; Time: 04:30 PM | IPC 1860 (U/s-143,504,324,323,506,149) |
| 4 | 20-08-2022 | Sakaleshpura, Hassan District | On 20-08-2022, a member of Bajrang Dal allegedly stopped Manjuntha, a Dalit farmer who was transporting cattle from his sister's house to his own house, verbally abused him using casteist slurs and attacked him physically. Manjunath filed a complaint against the attacker.<br><br>Subsequently, Manjunath's nephew was allegedly beaten by a group of 8-10 Bajrang Dal members including the person who had allegedly attacked Manjuantha earlier and a FIR was filed by the nephew against the attackers.<br><br>A counter-complaint was filed by Bajrang Dal members against Manjunath's nephew and DSS leaders alleging that they attacked Bajrang Dal members. | Attack on Manjunatha: Sakaleshpura Town PS CR No. 137/2022 Date: 20-08-2022 Time: 7:40 pm | IPC 1860 (U/s-341,323,504,506); The SC & ST (Prevention of Atrocities) Amendment Act 2015 (U/s-3(1) (r) (s),3(2)(va)) |
| | | | | Attack on Manjunatha's nephew: Sakaleshpura Town PS CR No. 138/2022 Date: 20-08-2022 Time: 9:40 pm | IPC 1860 (U/s-323,341,504,506,114,34) |
| | | | | Sakaleshpura Town PS CR No. 137/2022 Date: 21-08-2022 Time: 11:45 am | IPC 1860 (U/s-143,147,148,323,324,504,506,149) |
| 5 | 20-03-2023 | Electronic City, | On 20-03-2023 two Muslim men – a driver and a | Electronic City | PREVENTION |

| | | | | | |
|---|---|---|---|---|---|
| | | Bengaluru City | helper – were assaulted by a group of five persons led by Puneeth Kerehalli near Hosur Road Toll when they were in a vehicle with 8 animals. An FIR was filed against the two men in the vehicle while no FIR was filed against the attackers. Subsequently, a video of Puneeth Kerehalli using a taser gun on the helper came to light. The video was made by the attackers themselves when they went live on Facebook during the attack. An FIR against the attacks was filed almost 15 days later, based on the complaint from the person who was attacked with the taser gun. | PS CR No. 64/2023 Date: 20-03-2023 Time: 3:40 pm | OF CRUELTY TO ANIMALS ACT, 1960 (U/s-11); KARNATAKA PREVENTION OF COW SLAUGHTER & CATTLE PREVENTION ACT 2020 (U/s-4,5,6,7,12) |
| | | | | Electronic City PS CR No. 76/2023 Date: 06-04-2023 Time: 7:20 pm | IPC 1860 (U/s-427,506,341,34,504,323,324) |
| 6 | 27-01-2023 | Gonibeedu, Mudigere taluka, Chikkamagaluru District | An Assamese Muslim youth was tied to a pole and beaten by three Bajarang Dal activists on the suspicion of being in possession of beef, although possession of beef is not prohibited by the law. The whole act was video-recorded and circulated. The Police also registered a case against the victim for slaughtering cattle on the basis of possession of meat that could be beef. | Gonibeedu PS CR No. 6/2023 Date: 27-01-2023 Time: 6:45 pm | THE KARNATAKA PREVENTION OF SLAUGHTER AND PRESERVATION OF CATTLE ACT-2020 (U/s-4,12) |
| | | | | Gonibeedu PS CR No. 7/2023 Date: 28-01-2023 Time: 8:30 pm | IPC 1860 (U/s-143,341,342,504,506,323,149) |
| 7 | 30-03-2023 | Sathanuru, Kanakapura Taluka, Ramangara district | A vehicle carrying cattle was allegedly attacked by Puneeth Kerehalli and his associates on 30-03-2023 in Sathanuru, Kanakapura taluka, barely 400 meters from the Police station, leading to the death of Idrees Pasha.<br><br>The first FIR was filed against the cattle transporters. The second FIR was filed against the attackers based on the complaint of the driver of | Sathanuru PS CR No. 52/2023 Date: 01-04-2023 Time: 1:55 am | KARNATAKA PREVENTION OF COW SLAUGHTER & CATTLE PREVENTION ACT 2020 (U/s-4,5,12); PREVENTION OF CRUELTY TO ANIMALS ACT, 1960 (U/s-11(1) (A)); Transportation of Animal |

| | | | | | |
|---|---|---|---|---|---|
| | | | the vehicle. The third FIR was filed late in the evening based on the complaint by Mr. Idrees Pasha's brother. | | Act 1978 (U/s-97); |
| | | | | Sathanuru PS CR No. 52/2023<br>Date: 01-04-2023<br>Time: 5:55 am | IPC 1860 (U/s-143,341,504,149) |
| | | | | Sathanuru PS CR No. 52/2023<br>Date: 01-04-20233<br>Time: 4:25 pm | IPC 1860 (U/s-341,504,506,324,302,34) |